







ಲೋಹಾಗಡ್‌ವಡಿ ಹಳ್ಳಿಯೇ ಲೋಹಾಗಡ ಕೋಟೆಯ ಮೂಲನೆಲೆ. ಭಾಜಾದಿಂದ ಸುಮಾರು 6 ಕಿ.ಮೀ ದೂರದ ಈ ದಾರಿಯನ್ನು ಕಾಲ್ನಡಿಗೆಯಲ್ಲಿ ಸವೆಸಲು ಎರಡೂವರೆ ಗಂಟೆ ಹಿಡಿಯುತ್ತದೆ. ಲೋಹಾಗಡ್‌ವಡಿಗೆ ಕಾರು ಹೋಗುವ ದಾರಿಯೂ ಇದೆ. ನಡಿಗೆ ಇಷ್ಟವಿಲ್ಲದವರು ವಾಹನ ಬಳಸಿ ಕೋಟೆಯ ಮೂಲನೆಲೆಗೆ ತಲುಪಬಹುದು.

ಇನ್ನೊಂದು ದಾರಿ ಮುಂಬೈ–ಪುಣೆ ಎಕ್ಸ್‌ಪ್ರೆಸ್ ಹೈವೇ ಯಲ್ಲಿ ಸಿಗುತ್ತದೆ. ಈ ಎಕ್ಸ್‌ಪ್ರೆಸ್ ಹೈವೇಯಲ್ಲಿ ಸಿಂಹಗಡ್ ಇನ್ಸ್‌ಟಿಟ್ಯೂಟ್ ಪಕ್ಕ ಹೆದ್ದಾರಿಯಿಂದ ತಿರುವು ತೆಗೆದುಕೊಳ್ಳಬೇಕು. ಹಲವು ಹಳ್ಳಿಗಳನ್ನು ಹಾದುಹೋಗುವ, ಹಸಿರು ಕಣ್ಣು ಕುಕ್ಕುವ ಈ ಕಚ್ಚಾ ದಾರಿಯ ಪಯಣವೂ ಚೇತೋಹಾರಿ. ಮುಂಬೈಯವರು ಪಾವ್ನಾಗಡ್ ಮತ್ತ ಧೂದ್ವಿವೇರ್ ಖಿಂಡ್ ಮಾರ್ಗದ ಮೂಲಕವೂ ಲೋಹಾಗಢ ತಲುಪುತ್ತಾರೆ.

ಲೋಹಾಗಢ ದ ಮುಖ್ಯ ಆಕರ್ಷಣೆ 'ವಿಂಚು ಕಟ' ಎಂಬ ಚೇಳಿನ ಬಾಲದಾಕೃತಿಯ ಬೆಟ್ಟ. ಅದರ ತುತ್ತ ತುದಿಯವರೆಗೆ ಕಾಲ್ನಡಿಗೆಯಲ್ಲಿ ಹೋಗಿ ಬರುವದೊಂದು ರೋಮಾಂಚಕಾರಿ ಯಾತ್ರೆ. ದುರ್ಗಾ, ಮಹಾದರ್ವಾಜಾ, ಲಕ್ಷ್ಮಿ ಕೋಟಿ, ಷಟ್ಕೋನಾಕೃತಿಯ ಬಾವಿ, ಆನೆಗಳ ಸ್ನಾನದ ಹೊಂಡ, ಕುದುರೆ ಲಾಯ– ಹೀಗೆ ಅನೇಕ ಸಂಗತಿಗಳು ನಮ್ಮ ಗಮನ ಸೆಳೆಯುತ್ತವೆ. ಮಳೆಗಾಲದಲ್ಲಿ ಈ ಗುಡ್ಡ ಬೆಟ್ಟಗಳೆಲ್ಲ ಹಚ್ಚ ಹಸಿರಿನಿಂದ ತುಂಬು ತುಳುಕಿ ಪ್ರವಾಸಿಗರನ್ನು ಹೊಸದೊಂದು ಲೋಕಕ್ಕೆ ಕರೆದೊಯ್ಯುತ್ತವೆ. ಸಾಹಸ ಪ್ರವಾಸ ಕೈಗೊಳ್ಳುವವರಿಗೆ ಲೋಹಾಗಢ ಅತ್ಯಂತ ನೆಚ್ಚಿನ ತಾಣ ಎನ್ನುವುದರಲ್ಲಿ ಅನುಮಾನವಿಲ್ಲ.

ನಮ್ಮಲ್ಲಿ ಬಹುತೇಕ ಪ್ರವಾಸ ಸ್ಥಳಗಳು ವಾಣಿಜ್ಯೀಕರಣಗೊಂಡಿವೆ. ಆದರೆ ಲೋಹಾಗಢದ ದಾರಿ ಇನ್ನೂ ವಾಣಿಜ್ಯೀಕರಣದ ದಾಳಿಗೆ ಒಳಗಾಗಿಲ್ಲ. ಮುಂಬೈ ಮತ್ತು ಪುಣೆಯಿಂದ ಇಲ್ಲಿಗೆ ವಾರಾಂತ್ಯದ ಪ್ರವಾಸ ಕೈಗೊಳ್ಳುವವರು ಪದೇ ಪದೇ ಬರುವುದಿದೆ. ನಗರದ ಯಾಂತ್ರಿಕ ಜೀವನದ ಏಕತಾನತೆಯಿಂದ ಬಿಡುಗಡೆ ಹೊಂದಿ, ಗ್ರಾಮೀಣ ಪರಿಸರದ ಸ್ವಚ್ಛಹವೆಯ ಆಹ್ಲಾದಕರ ಅನುಭವ ಹೊಂದಲು ಅಲ್ಲಿನ ಜನರಿಗೆ ಇದೊಂದು ಅತ್ಯುತ್ತಮ ದಾರಿ ಎನ್ನಿಸಿದೆ.